1	2	3	4	5	6
10)	ಚಾಮರಾಜನಗರ	132	567	7	706
11)	ಮಂಡ್ಯ	419	1444	–	1863
12)	ಹಾಸನ	369	1006	27	1402
13)	ದಕ್ಷಿಣ ಕನ್ನಡ	1207	945	984	3136
14)	ಉಡುಪಿ	658	722	150	1530
15)	ಉತ್ತರ ಕನ್ನಡ	811	580	40	1431
16)	ಕೊಡಗು	137	539	–	676
17)	ಬೆಳಗಾವಿ	832	881	135	1848
18)	ಬಿಜಾಪುರ	179	428	15	622
19)	ಬಾಗಲಕೋಟೆ	397	577	–	974
20)	ಧಾರವಾಡ	810	787	153	1750
21)	ಹಾವೇರಿ	351	740	04	1095
22)	ಗದಗ್	214	468	–	682
23)	ಗುಲ್ಬರ್ಗ	281	409	8	698
24)	ಬೀದರ್	83	173	–	256
25)	ರಾಯಚೂರು	195	310	22	527
26)	ಕೊಪ್ಪಳ	95	193	02	290
27)	ಬಳ್ಳಾರಿ	342	330	24	696
	ಒಟ್ಟು	15732	20115	3122	38969

ದಿನಾಂಕ 7 1 2004 ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ಹುಲ್‌ಸೂರ್ ಕ್ಷೇತ್ರದ ಹುಲ್‌ಸೂರ ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ

16 (074) ಶ್ರೀ ರಾಜೇಂದ್ರ ವರ್ಮ (ಹುಲಸೂರ್) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಹುಲಸೂರು ವಿಧಾನ ಸಭಾ ಕ್ಷೇತ್ರದ ಹುಲಸೂರು ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ

ಆ) ಸರ್ಕಾರ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಕಾಲಮಿತ ನಿಗದಿ ಪಡಿಸಿದೆಯೇ

ಇ) ಯೋಜನೆಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಅಂದಾಜು ವೆಚ್ಚವೆಷ್ಟು?

ಶ್ರೀ ಕೆ ಬಿ ಕೋಳಿವಾಡ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಹೌದು ಬೀದರ್ ಜಿಲ್ಲೆಯ ಹುಲಸೂರ ವಿಧಾನ ಸಭಾ ಕ್ಷೇತ್ರದ ಹುಲಸೂರ ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಒದಗಿಸಲು ಈ ಗ್ರಾಮವನ್ನು ಜಲ ನಿರ್ಮಲ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ

ಆ) ಈ ಯೋಜನೆಯ ಕಾಮಗಾರಿಗಳನ್ನು ಮಾರ್ಚ್ 2004 ರಲ್ಲಿ ಪ್ರಾರಂಭಿಸಿ 2005ರ ಮಾರ್ಚ್ ತಿಂಗಳಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ

ಇ) ರೂ 220 00 ಲಕ್ಷಗಳು
(ರೂ 150 00 ಲಕ್ಷ ನೀರು ಸರಬರಾಜಿಗೆ)
(ರೂ 70 00 ಲಕ್ಷ ರಸ್ತೆ ಮತ್ತು ಚರಂಡಿಗೆ)

ರಾಜ್ಯದಲ್ಲಿರುವ ಮುದ್ರಣ ಪ್ರಕಾಶಕರ ಬೇಡಿಕೆಗಳು

17 (76) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮುದ್ರಣ ಪ್ರಕಾಶಕರು ಸರ್ಕಾರಕ್ಕೆ ಬೇಡಿಕೆಗಳನ್ನು ಸಲ್ಲಿಸಿರುವುದು ನಿಜವಲ್ಲವೇ

ಆ) ಹಾಗಿದ್ದಲ್ಲಿ ಆ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಾಬು ರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ನಿಜ

ಆ) ಸರ್ಕಾರದ ಮಟ್ಟದಲ್ಲಿ ಈಗಾಗಲೇ ಮುದ್ರಣ ಪ್ರಕಾಶಕರು, ಲೇಖಕರು ಲೇಖನ ಪ್ರಕಾಶಕರು ಇವರೊಂದಿಗೆ ಚರ್ಚಿಸಲಾಗಿದೆ ಇವರುಗಳ ಬೇಡಿಕೆಗಳ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದ್ದು, ಮುದ್ರಣ ಆಯ್ಕೆ ಮತ್ತು ಖರೀದಿ ನಿಯಮಗಳಲ್ಲಿ ಅಗತ್ಯವಿದ್ದಲ್ಲಿ ಸೂಕ್ತ ತಿದ್ದುಪಡಿ ತಂದು ಕ್ರಮ ವಹಿಸಲಾಗುವುದು

ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಗೈರು ಹಾಜರಿ

18 (513) ಶ್ರೀ ಸುಬ್ಬಾರೆಡ್ಡಿ ಕೆ ಎನ್ (ಬಸವನಗುಡಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ಆರೋಗ್ಯ ಕೆಂದ್ರಗಳಲ್ಲಿ ಹಲವಾರು ದಿನಗಳಿಂದ ಗೈರುಹಾಜರಾದ ಸರ್ಕಾರಿ ವೈದ್ಯರುಗಳ ಸಂಖ್ಯೆ ಎಷ್ಟು

ಆ) ಈ ವೈದ್ಯರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 146

ಆ) ವೈದ್ಯರುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ

1	ದೋಷಾರೋಪಣಾ ಪಟ್ಟಿ ಜಾರಿಯಾದ / ಜಾರಿಯಾಗಬೇಕಾದ ವಿಚಾರಣಾ ಪೂರ್ವ ಹಂತದ ಪ್ರಕರಣಗಳು	90
2	ವಿಚಾರಣಾ ವರದಿ ಸ್ವೀಕರಿಸಿದ್ದು ವರದಿಯ ಮೇಲೆ ಕ್ರಮ ಕೈಕೊಳ್ಳಲಾಗುತ್ತಿರುವ ಪ್ರಕರಣಗಳು	03
3	ವಾರ್ಷಿಕ ವೇತನ ಬಡ್ತಿ ತಡೆ ಹಿಡಿಯುವ ಇನ್ನಿತರೆ ಲಘು ದಂಡನೆ ವಿಧಿಸಿದ ಪ್ರಕರಣಗಳು	10
4	ಕಡ್ಡಾಯ ನಿವೃತ್ತಿ ಆದೇಶವಾದ ಪ್ರಕರಣಗಳು	01